# ದಾರಾಶಿಕೊ ನಾಟಕದಲ್ಲಿ ಧಾರ್ಮಿಕ ಸಮನ್ವಯತೆ

ಡಾ. ಸಂಗಪ್ಪ ತೌಡಿ
ಕನ್ನಡ ಸಹಾಯಕ ಪ್ರಾಧ್ಯಾಪಕ ಕರ್ನಾಟಕ
ಕಾಲೇಜು ಬೀದರ-೫೮೫೪೦೧

ರಾಜಪ್ಪ ದಳವಾಯಿರವರು ಮೊಘಲ್ ಸಾಮ್ರಾಜ್ಯದ ಚರಿತ್ರೆಯನ್ನು ನಾಟಕ ರೂಪದಲ್ಲಿ ಹಿಡಿದಿದ್ದಾರೆ. ದಾರಾಶಿಕೊನ ಸಾಹಿತ್ಯದ ಹುಚ್ಚು ಮತ್ತು ಆತನ ವಿಶಾಲವಾದ ಬದುಕಿನ ತಿಳಿವಳಿಕೆಯನ್ನು ನಾಟಕದಲ್ಲಿ ಚರ್ಚಿಸಿದ್ದಾರೆ. ಕನ್ನಡ ನಾಟಕ ಸಾಹಿತ್ಯದಲ್ಲಿ ತುಘಲಕ, ಗುಣಮುಖ, ಟಿಪ್ಪುಸುಲ್ತಾನ್, ಮಹಮ್ಮದ್ ಗವಾನ, ಇತ್ತೀಚಿನ ನಾಟಕ ರಸಗಂಗಾಧರ, ದಾರಾಶಿಕೊ ಈ ನಾಟಕಗಳು ಇಸ್ಲಾಂ ಧರ್ಮದ ಅರಸರ ರಾಜಕೀಯ, ಸಾಮಾಜಿಕ ಧಾರ್ಮಿಕ ಜೀವನವನ್ನು ಕನ್ನಡಕ್ಕೆ ಹೊಸ ಬಗೆಯ ಸಾಹಿತ್ಯ ಲೋಕವನ್ನು ಕಟ್ಟಿಕೊಡುವಲ್ಲಿ ಯಶಸ್ವಿಯಾಗಿವೆ. ದಾರಾಶಿಕೊ ನಾಟಕವು ಮೊಘಲ್ ರಾಜಕೀಯ, ದಾರಾಶಿಕೊನು ಎಲ್ಲ ಧರ್ಮಗಳನ್ನು ಸಮಾನವಾಗಿ ಕಾಣುವುದು, ಮತ್ತು ಆತನ ಮಾನವೀಯತೆಯ ಮೇಲಿನ ಅತಿಯಾದ ಪ್ರೀತಿ ಔರಂಗಜೇಬನ ದ್ವೇಷ, ಆತನ ಅಸಹನೆಗಳನ್ನು ಒಳಗೊಂಡ ಸೊಗಸಾದ ನಾಟಕವಿದು.

ವಿಮರ್ಶಕ - ಕಥೆಗಾರ ನಾಟಕಕಾರ ರಾಜಪ್ಪ ದಳವಾಯಿ ಅದನ್ನು ನಾಟಕಕ್ಕೆ ಅಳವಡಿಸಿದ್ದಾರೆ. ಮುಖ್ಯವಾಗಿ ನಾಟಕದಲ್ಲಿ ಮತ- ಮತಗಳ ವೈಷಮ್ಯ, ಅಧಿಕಾರ ಅಂತಸ್ತುಗಳ ಮೇಲಿನ ಬಿಕ್ಕಟ್ಟುಗಳನ್ನು ದಾರಾಶಿಕೊನ ಧಾರ್ಮಿಕ ಏಕತೆಯನ್ನು ಚಿತ್ರಿಸಿ, ಆತನ ಸಾವಿನ ದುರಂತವನ್ನು ನಾಟಕದಲ್ಲಿ ವಿವರಿಸಿದ್ದಾರೆ.

ದಾರಶಿಕೊ ಔರಂಗಜೇಬನ ಅಣ್ಣನಾದರೂ ಇವನು ಯಾವುದೇ ಹಿಂಸೆಗಳಿಗೆ ಬಲಿಯಾಗದೆ, ಯಾವಾಗಲೂ ಶಾಂತ ಸ್ಥಿತಿಯ ವ್ಯಕ್ತಿಯಾಗಿದ್ದ. ಅಧಿಕಾರದ ಮೇಲೆ ಇವನಿಗೆ ಮೋಹ ಇರಲಿಲ್ಲ. ತಾನು ಸಾಹಿತ್ಯ ಸಂಗೀತ ಲೋಕದಲ್ಲಿಯೇ ಬದುಕುತ್ತಿರುವನು. ಮನುಷ್ಯನ ಸಮಾಜಕ್ಕೆ ಅಡ್ಡಗೋಡೆಯಾಗಿರುವ ಮಸೀದಿ ಮಂದಿರಗಳನ್ನು ಒಂದೇ ನೆಲೆಯಲ್ಲಿ ನೋಡುವನು.

"ಮಂದಿರ ಮಸೀದಿ ಎರಡೂ ಒಂದೇ
ಮನುಷೋದ್ಧಾರದ ಉದ್ದೇಶವೊಂದೆ
ಕರುಣೆ ದಾನ ದಯೆಯೇ ಧರ್ಮ

ಇದುವೆ ನಮ್ಮ ಬಾಳಿನ ಮರ್ಮ" (ಪ-೫)

ದಾರಾಶಿಕೊ ಒಬ್ಬ ಧಾರ್ಮಿಕ ಸಮನ್ವಯಕಾರನಾಗಿ ಕಂಡು ಬರುತ್ತಾನೆ. ಅವನು ನೋಡುವ ಧರ್ಮವೆಂದರೆ ಅದು ಮಾನವ ಧರ್ಮ ಮನುಷ್ಯನಲ್ಲಿ ಯಾವಾಗಲೂ ಕರುಣೆ ದಾನ ದಯೇ ಇರಬೇಕು. ಮಾನವನು ಮಸೀದಿ ಮಂದಿರ ಸಲುವಾಗಿ ಸಮಾಜದಲ್ಲಿ ಹೋರಾಟ ಮಾಡಬಾರದು. ಮಸೀದಿ ಮಂದಿರ ಎರಡು ಒಂದೇ ಎರಡರಲ್ಲೂ ದೇವರನ್ನು ಕಾಣಬೇಕು ಅಂದಾಗ ಮಾತ್ರ ವ್ಯಕ್ತಿಯ ಬದುಕಿಗೆ ಅರ್ಥ ಬರುತ್ತದೆ ಎಂದು ದಾರಾಶಿಕೊನ ಮಾತಿನ ಮೂಲಕ ಅರಿಯಬಹುದು ಮತ್ತು ಅವನಲ್ಲಿರುವ ಕಾಳಜಿಯನ್ನು ಗಮನಿಸಬಹುದು. ಈ ಮೂಲಕ ದಾರಾಶಿಕೊ ಒಬ್ಬ ಯೋಗಿಯಾಗಿ ಸಮಾಜದ ಮುಂದೆ ನಿಂತುಕೊಳ್ಳುವ ಶಕ್ತಿಯನ್ನು ಹೊಂದಿರುತ್ತಾನೆ. ಷಹಜಹಾನನಿಗೆ ಜನಿಸಿದ ಮಕ್ಕಳಲ್ಲಿ ದಾರಶಿಕೊ ತಮ್ಮ ಧರ್ಮದ ಸಂಪ್ರದಾಯವನ್ನು ಮೀರುವ ಪ್ರಯತ್ನವನ್ನು ಮಾಡುತ್ತಾನೆ. ಆದರೆ ಔರಂಗಜೇಬ ಮುಸ್ಲಿಂ ಧರ್ಮದ ಮೂಲಭೂತ ತತ್ವಗಳಿಗೆ ಕಟ್ಟು ಬೀಳುತ್ತಾನೆ. ಅಣ್ಣ ದಾರಾಶಿಕೊನು ಈ ಯಾವ ಬಗೆಯ ಕೃತ್ಯಗಳಿಗೆ ಬಲಿಯಾಗುವುದಿಲ್ಲ. ಈ ಕಾರಣಕ್ಕಾಗಿ ಔರಂಗಜೇಬನಿಗೆ ದಾರಶಿಕೊ ಇಸ್ಲಾಂ ಧರ್ಮದ ದ್ವೇಷಿಯಂತೆ ಕಂಡು ಬರುತ್ತಾನೆ.

ದಾರಾಶಿಕೋ ಇಸ್ಲಾಂ ಧರ್ಮದ ಪವಿತ್ರ ಗ್ರಂಥವಾದ ಕುರಾನಿನ ಜೊತೆಗೆ ಹಿಂದೂ ಧರ್ಮದ ವೇದ ಉಪನಿಷತಗಳನ್ನು ತೌಲನಿಕವಾಗಿ ಚರ್ಚಿಸುತ್ತಾನೆ. ಯಾವಾಗಲೂ ಸತ್ಯದ ಹುಡುಕಾಟ ದಾರಾಶಿಕೊನ ತಲೆಯಲ್ಲಿ ನಡೆಯುತ್ತದೆ. ಧರ್ಮಗಳ ಸಾರವನ್ನು ಅರಿಯಲು ಉತ್ಸುಕನಾಗಿರುತ್ತಾನೆ. ಹಿಂಸೆಯ ಯುದ್ಧದ ಮನೆಯಲ್ಲಿ ಸಾಹಿತ್ಯದ ಬೆಳಕು ಬೆಳಗಿದವನು ದಾರಾಶಿಕೊ. ಮನೆಯಲ್ಲೇ ಸ್ವಂತ ಗ್ರಂಥಾಲಯವನ್ನು ನಿರ್ಮಿಸಿಕೊಂಡು ದಿನನಿತ್ಯವು ಓದುವನು. ಹಲವು ಗ್ರಂಥಗಳನ್ನು ತೆರೆದು ಓದುತ್ತಾನೆ. ಒಂದು ಕಡೆ ಕುರಾನ್, ಮತ್ತೊಂದು ಕಡೆಗೆ ವೇದ ಉಪನಿಷತ್ ಯೋಗವಾಸಿಷ್ಟ ಗ್ರಂಥಗಳಿವೆ. ಇವುಗಳನ್ನು ಸದಾ ಮನೆಯಲ್ಲಿ ಓದುತ್ತಿರುತ್ತಾನೆ. ಈ ಮೂಲಕ ಎರಡು ಧರ್ಮಗಳ ಸತ್ಯದ ದಾರಿಗಳು ಒಂದೇ ಎಂದು ಕಂಡುಕೊಳ್ಳುತ್ತಾನೆ. ಈ ಮೂಲಕ ಧಾರ್ಮಿಕ ಸಮನ್ವಯತೆಯನ್ನು ಕಾಣಬಹುದಾಗಿದೆ. ನಾವುಗಳು ಇವುಗಳಿಗೆ ಬಲಿಯಾಗದೆ ನಮ್ಮ ಬಾಳಿನ ಉದ್ಧಾರವನ್ನು ನಾವೇ ಮಾಡಿಕೊಳ್ಳಬೇಕು ಎಂದು ದಾರಾಶಿಕೊ ಶಾಂತಿಯ ಮಂತ್ರವನ್ನು ಧರ್ಮಗಳ ಏಕತೆಯನ್ನು ಕಟ್ಟುವುದಕ್ಕೆ ಪ್ರಯತ್ನ ಮಾಡುವನು. ತನ್ನ ಸಾಹಿತ್ಯ ಮತ್ತು ಓದಿನ ಮೂಲಕ ದಾರಶಿಕೊ ಸಮಾಜವನ್ನು ಮಾನವೀಯತೆಯ ಮೌಲ್ಯದಲ್ಲಿ ಕಟ್ಟುವುದಕ್ಕೆ ಪ್ರಯತ್ನಿಸುತ್ತಾನೆ.

ಎರಡು ಧರ್ಮಗಳನ್ನು ಸಮಾನವಾಗಿ ನೋಡುವ ದೃಷ್ಟಿಕೋನದಿಂದಲೇ ದಾರಾಶಿಕೊ ಒಂದು ಮಾತನ್ನು ಹೇಳುವನು.

"ಹಿಂದೂಗಳ ಆತ್ಮಶೋಧನೆ ನನಗೆ ಹೊಸ ದಾರಿ ತೋರಿದೆ,

ದಿವ್ಯ ಕುರಾನ್ ವಾಕ್ಯಗಳು ಸ್ವರ್ಗದ ಬಾಗಿಲಿಗೆ ಕರೆದೊಯ್ದಿವೆ" (ಪು-೬)

ದಾರಾಶಿಕೊನ ಧಾರ್ಮಿಕ ಸಮನ್ವಯದ ಚಿಂತನಾಶೀಲತೆಯನ್ನು ಅರಿಯುವುದಕ್ಕೆ ಸಾಧ್ಯವಾಗುತ್ತದೆ. ಷಹಾಜಹಾನ್ ತನ್ನ ಮಕ್ಕಳಿಗೆ ಸಾಮ್ರಾಜ್ಯವನ್ನು ವಿಸ್ತರಿಸಿ ಹಂಚುತ್ತಾನೆ. ಮುರಾದ್ ಭಕ್ಷಕನಿಗೆ ಬಂಗಾಳ, ಷಹಾಶೂಜನಿಗೆ ಗುಜ್ಜರಕ್ಕೆ, ಔರಂಗಜೇಬಗೆ ದಖ್ಖನ್ನಿಗೆ ಹೋಗು, ದಾರಾಶಿಕೊ ನನ್ನೊಂದಿಗೆ ಇರಲಿ ಎಂದು ಷಹಜಹಾನ್ ಹೇಳುವನು. ನೀವೆಲ್ಲ ಮೊಘಲ್ ಸಾಮ್ರಾಜ್ಯಕ್ಕೆ ನಾಲ್ಕು ಆಧಾರಸ್ತಂಭಗಳು, ಹಿಂದೂಸ್ತಾನದ ಮುಕ್ಕಾಲು ನಮ್ಮದೆ ನಿಮ್ಮ ಜವಾಬ್ದಾರಿಗಳು ಹೆಚ್ಚಿವೆ ಎಂದು ಮಕ್ಕಳಿಗೆ ಸಾಮ್ರಾಜ್ಯದ ಮೇಲಿನ ಹಿಡಿತದ ಬಗ್ಗೆ ಎಚ್ಚರಿಕೆಯ ಮಾತುಗಳನ್ನು ಆಡುತ್ತಾನೆ.

ಈ ಘಟನೆಯ ಮುಖಾಂತರವಾಗಿ ಮುಸ್ಲಿಂ ದೊರೆಗಳಿಗೆ ಕೇವಲ ಅಧಿಕಾರ ಮೋಹ ಮಾತ್ರ ಇರುತ್ತದೆ. ಆದರೆ ದಾರಾಶಿಕೊ ಈ ಪಟ್ಟಿಗೆ ಸೇರುವುದಿಲ್ಲ. ಯಾವಾಗಲೂ ಅವನಲ್ಲಿ ಶಾಂತಿಯ ಮಂತ್ರ ಅಧಿಕಾರದ ವ್ಯಾಮೋಹ ಮತ್ತು ದರ್ಪವನ್ನು ವಿರೋಧಿಸುತ್ತಾನೆ. ಇವನಲ್ಲಿ ಸಂಪತ್ತಿನ ವ್ಯಾಮೋಹ ಏನು ಇರುವುದಿಲ್ಲ. ಯಾವಾಗಲೂ ಅವನ ತಲೆಯಲ್ಲಿ ಸಾಹಿತ್ಯ ಸಂಗೀತ ಕಲೆಯ ಕುರಿತು ನಿರಂತರವಾಗಿ ಹೊಸ ಹೊಸ ಪ್ರಯೋಗಗಳು ನಡೆಯುತ್ತವೆ. ದಾರಶಿಕೊ ಮಾಡುವ ಕೆಲಸವನ್ನು ನೋಡಿ ಔರಂಗಜೇಬ ಕೋಪದಿಂದ ಬೈಯುತ್ತಾನೆ.

"ಕವಿ ಕಾವ್ಯ ಜಿಜ್ಞಾಸೆ ತತ್ವ ಎಂದು ಧರ್ಮನಿರಪೇಕ್ಷೆಯೆಂಬ ಧರ್ಮ ನಿಂದನೆ ಮಾಡುವ ಜನಕ್ಕೆ

ಆಗ್ರಾದ ಅರಸೊತ್ತಿಗೆ ಏಕೆ?" (ಪುಟ-೧೩)

ಔರಂಗಜೇಬನು ದಾರಶಿಕೊ ಪ್ರೀತಿಸುವ ಕಾವ್ಯ ಸಂಗೀತ ಧರ್ಮದ ಸಾರವನ್ನು ಅರಿಯಲು ಪ್ರಯತ್ನಿಸುವ ಕೆಲಸಗಳಿಗೆ ಔರಂಗಜೇಬನು ನೇರವಾಗಿ ಪ್ರತಿಭಟಿಸುತ್ತಾನೆ. ಔರಂಗಜೇಬನು ತನ್ನ ಸಾಮ್ರಾಜ್ಯದಲ್ಲಿ ಸರ್ವಾಧಿಕಾರಿಯಂತೆ ವರ್ತಿಸುತ್ತಾನೆ. ಇವನು ಮಾಡುವ ಕಾರ್ಯಗಳನ್ನು ನೋಡಿ ಕವಿ ದಾರಶಿಕೊ ಈ ಮಾತುಗಳನ್ನು ಆಡುವನು.

"ನಿನ್ನ ನಿರ್ಧಾರಗಳನ್ನು ಸ್ವಲ್ಪ ಬದಲಿಸಿಕೋ ಖಲೀಲ್

ಪ್ರಜೆಗಳ ರಕ್ಷಣೆ ಮಂತ್ರಿಗಳ ಕೈಲಿ ಎಂದು

ಮೊಗಲರ ಅಧಿಕಾರವನ್ನು ತಲೆ ಮೇಲಿರುವ

ವಜ್ರದ ಅರಳಿನಿಂದ ನೋಡಬೇಕು." (ಪುಟ- ೧೮)

ದಾರಶಿಕೋ ರಾಜಕಾರಣದ ನೀತಿಯ ಪಾಠವನ್ನು ತಮ್ಮನಾದ ಔರಂಗಜೇಬನಿಗೆ ಹೇಳುವನು. ಪ್ರಭುತ್ವ ಮತ್ತು ಧರ್ಮದ ಕ್ರೂರತೆಯಿಂದ ಔರಂಗಜೇಬನು ಸಾಹಿತ್ಯ ಕಲೆ ಸಂಗೀತದ ಮಹತ್ವವನ್ನು ಅರಿಯುವುದಿಲ್ಲ. ಈ ಕೃತಿಯಲ್ಲಿ ಔರಂಗಜೇಬನ ಕ್ರೂರ ಪ್ರಭುತ್ವ ಅಧಿಕಾರ ಅನಾವರಣಗೊಂಡಿದೆ. ದಾರಶಿಕೊನ ಸಾಹಿತ್ಯದ ಮೇಲಿನ ಪ್ರೀತಿ ನಾಟಕದಲ್ಲಿನ ಅವನ ಮಾತುಗಳು ಕೇಳಿದರೆ ನಾಟಕ ಓದುಗರಿಗೆ ಕೆಲಕಾಲ ಹಿಡಿದಿಡುವ ಶಕ್ತಿಯನ್ನು ಹೊಂದಿದೆ. ಈ ನಾಟಕ ಮೊಗಲರ ಆಳ್ವಿಕೆ ಕಾಲದ ಸಾಹಿತ್ಯ ಮತ್ತು ಧರ್ಮದ ವಿಷಯವಸ್ತು ಒಳಗೊಂಡಿರುವುದರಿಂದ ಇದೊಂದು ಸಾಹಿತ್ಯಕ ನಾಟಕವಾಗಿದೆ. ಇಲ್ಲಿನ ನಾಯಕ ದಾರಶಿಕೊ ಧರ್ಮಗಳ ಕೋಮುವಾದದ ವಿಷವೃಕ್ಷಕ್ಕೆ ಕಾರಣವಾದ ವ್ಯಕ್ತಿಗಳ ವಿರುದ್ಧವಾಗಿ ದಾರಶಿಕೊ ಸಮಾನತೆಯ ತತ್ವವನ್ನು ಪ್ರತಿಪಾದಿಸುವನು. ಎಲ್ಲ ಧರ್ಮಗಳ ಒಳಿತನ್ನು ಸಾರುವನು. ಧರ್ಮ ಧರ್ಮಗಳ ನಡುವೆ ಇರುವ ಬಿಕ್ಕಟ್ಟುಗಳನ್ನು ಸುಧಾರಿಸುವುದಕ್ಕೆ ಶ್ರಮಿಸುತ್ತಾನೆ.

ಧರ್ಮ ರಾಜಕಾರಣ ಬೆರೆತಿದ್ದರಿಂದ ದೇಶದಲ್ಲಿ ಅನುಕೂಲಕ್ಕಿಂತ ಅನನಕೂಲವೇ ಹೆಚ್ಚಾಗಿದೆ. ಎರಡರ ಬೆಸುಗೆಯಿಂದ ಮಾನವೀಯತೆ, ಉದಾರತೆ, ಶಾಂತಿ, ತ್ಯಾಗ, ದಯೆ, ಕರುಣೆಗಳು ರೂಪು ಪಡೆಯುವ ಬದಲು ಅಮಾನವೀಯತೆ ಸಂಕುಚಿತತೆ ಕ್ಷೋಭೆ, ಸ್ವಾರ್ಥ, ನಿರ್ದಯೆ, ದ್ವೇಷಗಳು ಬೆಳೆಯುತ್ತಿವೆ. ದಾರಾಶಿಕೊ ನಾಟಕವು ಇಂತಹ ಕೆಲವು ಚಿಂತನೆಗಳನ್ನು ಹೊಸ ದೃಷ್ಟಿಕೋನದಲ್ಲಿ ಓದುಗರಿಗೆ ನೀಡುತ್ತದೆ.

ನಾಟಕವು ದುರಂತದಲ್ಲಿ ಮುಗಿದರೂ ಕೂಡ ಸಾಹಿತ್ಯದ ಮೇಲಿನ ದಾರಾಶಿಕೋನ ಪ್ರೇಮ ಅವನ ವಿದ್ವತ್ತು ಮತ್ತು ಪ್ರೀತಿ ಸ್ನೇಹ ಅಧಿಕಾರ ಇವುಗಳು ನಾಟಕದಲ್ಲಿ ಬಹಳ ಮಹತ್ವವನ್ನು ಪಡೆಯುತ್ತವೆ. ನಾಟಕವು ಧರ್ಮ ಸಾಹಿತ್ಯ ರಾಜಕಾರಣಕ್ಕೆ ಸಂಬಂಧಿಸಿದ ಕೆಲವು ಸಮಕಾಲೀನ ಸಮಸ್ಯೆಗಳನ್ನು ಇದು ಚರ್ಚಿಸುವುದಾಗಿದೆ. ಇದು ಕನ್ನಡದ ಕೆಲವು ಮಹತ್ವದ ದುರಂತ ನಾಟಕಗಳಲ್ಲಿ ಒಂದಾಗಿದೆ.

**ಪರಾಮರ್ಶನ ಗ್ರಂಥಗಳು:**

೧. ದಾರಾಶಿಕೊ, ಡಾ. ರಾಜಪ್ಪ ದಳವಾಯಿ ವಿದ್ಯಾನಿಧಿ ಪ್ರಕಾಶನ ಗದಗ-೨೦೦೯

೨. ಹೊಸಗನ್ನಡ ಸಾಹಿತ್ಯ ಚರಿತ್ರೆ, ಎಲ್ ಎಸ್. ಶೇಷಗಿರಿರಾವ್, ಸಪ್ನ ಬುಕ್ ಹೌಸ್ ಬೆಂಗಳೂರು-೨೦೨೦

೩. ಆಧುನಿಕ ಕನ್ನಡ ನಾಟಕ, ಕೆ. ಮರುಳಸಿದ್ದಪ್ಪ, ಅಂಕಿತ ಪುಸ್ತಕ ಬೆಂಗಳೂರು-೨೦೧೩